# Current affairs of 2018-07-30 by KPSCVAANI.com

* ಇ–ಲಿಂಕ್ ರಾಜ್ಯಕ್ಕೆ 8ನೇ ಸ್ಥಾನ

* ಕೃಷಿ ಉತ್ಪನ್ನಗಳ ವಹಿವಾಟಿಗೆ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಅಳವಡಿಸಿಕೊಳ್ಳುವಲ್ಲಿ ರಾಜ್ಯದ ಇ-ಮಾರುಕಟ್ಟೆಯನ್ನು ಕೇಂದ್ರದ ನೆಟ್‌ವರ್ಕ್‌ಗೆ ಜೋಡಣೆ ಮಾಡದಿರುವುದರಿಂದ ಹಿನ್ನಡೆಯಾಗಿದೆ. * ರಾಜ್ಯದಲ್ಲಿ ಇ-ಮಾರುಕಟ್ಟೆ ತರುವ ಪ್ರಕ್ರಿಯೆ 2013 ರಲ್ಲೇ ಪ್ರಾರಂಭವಾಗಿದೆ. ಬಳಿಕ ಎಪಿಎಂಸಿಗಳ ಮೂಲಕ ಆನ್‌ಲೈನ್ ಮಾರ್ಕೆಟಿಂಗ್‌ಗೆ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಲು ಸಾಧ್ಯವಾಗಿದ್ದು ರೈತರಿಗೂ ಅನುಕೂಲವಾಗಿದೆ. ಕೃಷಿ ಮಾರುಕಟ್ಟೆಯಲ್ಲಿ ಇಂತಹ ತಂತ್ರಜ್ಞಾನ ತಂದ ಮೊದಲ ರಾಜ್ಯವೆಂಬ ಹೆಗ್ಗಳಿಕೆಗೂ ರಾಜ್ಯ ಪಾತ್ರವಾಗಿತ್ತು. ರಾಜ್ಯ ಹಿಂದುಳಿಯಲು ಕಾರಣವೇನು? ಉದಾರೀಕರಣದ ಲಾಭವನ್ನು ಕೃಷಿ ಕ್ಷೇತ್ರಕ್ಕೆ ಸರಿಯಾಗಿ ವಿಸ್ತರಿಸಿಲ್ಲ. ಅಗ್ರಿ ಬಿಸಿನೆಸ್ ಗೆ ಒತ್ತು ನೀಡಿಲ್ಲ. ಇ -ನಾಮ್ ನೊಂದಿಗೆ ಜೋಡಣೆಯಾಗಿಲ್ಲ. ಕೃಷಿ ಭೂಮಿ ಲೀಸ್ ಗೆ ಕೊಡುವುದರಲ್ಲಿ ನಿರ್ಬಂಧ. ಟಾಪ್ ಟೆನ್ ರ‍್ಯಾಂಕ್ (□□□□) : 1 ಮಹಾರಾಷ್ಟ್ರ 2 ಗುಜರಾತ್ 3 ರಾಜಸ್ತಾನ 4 ಮಧ್ಯ ಪ್ರದೇಶ 5 ಹರಿಯಾಣ 6 ಹಿಮಾಚಲ ಪ್ರದೇಶ 7 ಆಂಧ್ರ ಪ್ರದೇಶ 8 ಕರ್ನಾಟಕ 9 ತೆಲಂಗಾಣ 10 ಗೋವಾ

* ಪರಿಸರ ಸೂಕ್ಷ್ಮ ವಲಯ



ಮಲೆಮಹದೇಶ್ವರ ವನ್ಯಧಾಮದ 143.12 ಚದರ ಕಿ.ಮೀ ವ್ಯಾಪ್ತಿ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಘೋಷಿಸಿದೆ. ವನ್ಯಧಾಮದ 8 ಕಂದಾಯ ಗ್ರಾಮಗಳು ಹಾಗೂ 18 ಅರಣ್ಯ ಗ್ರಾಮಗಳು ಪರಿಸರ ಸೂಕ್ಷವಲಯ ವ್ಯಾಪ್ತಿಯಲ್ಲಿ ಬರುತ್ತವೆ. ಈ ಪ್ರದೇಶದಲ್ಲಿ 30ಕ್ಕೂ ಹೆಚ್ಚು ಅಧಿಕ ವಾಣಿಜ್ಯ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಕಡಿವಾಣ ಬೀಳಲಿದೆ. ಯಾವುದಕ್ಕಿಲ್ಲ ನಿಯಂತ್ರಣ ? ಪರಿಸರಸ್ನೇಹಿ ಪ್ರವಾಸೋದ್ಯಮ ಉದ್ದೇಶಕ್ಕೆ ನಿರ್ಮಿಸಿಕೊಂಡಿರುವ ತಾತ್ಕಾಲಿಕ ಡೇರೆಗಳು. ಮಾಲಿನ್ಯರಹಿತ ಸಣ್ಣ ಪ್ರಮಾಣದ ಉದ್ಯಮಗಳು . ಮರಗಳ ತೆರವು, ರಾತ್ರಿ ರಸ್ತೆ ಸಂಚಾರ. ವಿದ್ಯುತ್, ದೂರವಾಣಿ ಹಾಗೂ ಇತರೆ ಸಂಪರ್ಕ ಮಾಧ್ಯಮಗಳ ಕಂಬಳ ಅಳವಡಿಕೆ. ರಸ್ತೆ ವಿಸ್ತರಣೆ ಹಾಗೂ ಹೊಸ ರಸ್ತೆಗಳ ನಿರ್ಮಾಣ. ಸಂಸ್ಕರಿಸಿದ ನೀರನ್ನು ನೈಸರ್ಗಿಕ ಭೂಪ್ರದೇಶಗಳಿಗೆ ಬಿಡುವುದು. ಪಾಲಿಥೀನ್ ಬ್ಯಾಗ್ ಬಳಕೆ, ವಾಣಿಜ್ಯ ಫಲಕಗಳ ಅಳವಡಿಕೆ. ಯಾವೆಲ್ಲಾ ಚಟುವಟಿಕೆಗಳಿಗೆ ನಿಷೇಧ ? ವಾಣಿಜ್ಯ ಗಣಿಗಾರಿಕೆ, ಕಲ್ಲು ಕ್ವಾರಿ ಹಾಗೂ ಕ್ರಶಿಂಗ್ ಘಟಕಗಳು. ನೀರು, ಗಾಳಿ, ಮಣ್ಣು ಹಾಗೂ ಶಬ್ದಮಾಲಿನ್ಯ ಉಂಟುಮಾಡುವ ಉದ್ಯಮಗಳ ಸ್ಥಾಪನೆ, ದೊಡ್ಡ ಜಲವಿದ್ಯುತ್ ಘಟಕಗಳು. ಹಾನಿಕಾರಕ ವಸ್ತುಗಳ ಬಳಕೆ ಅಥವಾ ಉತ್ಪಾದನೆ ಸಂಸ್ಕರಿಸಿದ ನೀರನ್ನು ನೈಸರ್ಗಿಕ ನೀರಿನ ಮೂಲಗಳಿಗೆ ಹರಿಬಿಡುವುದು. ಕಂಪನಿಗಳ ದೊಡ್ಡಮಟ್ಟದ ವಾಣಿಜ್ಯ ಉದ್ದೇಶದ ಕೋಳಿ ಹಾಗೂ ದನಕರುಗಳ ಫಾರ್ಮ್‌ಗಳು. ಮರದ ಮಿಲ್‌ಗಳು, ಇಟ್ಟಿಗೆ ಗೂಡುಗಳು, ಉರುವಲು ಕಟ್ಟಿಗೆಯ ವಾಣಿಜ್ಯ ಉದ್ದೇಶದ ಬಳಕೆ ಇದರ ವ್ಯಾಪ್ತಿಗೆ ಬರುವ ಗ್ರಾಮಗಳು ಕಂದಾಯ ಗ್ರಾಮಗಳು: ರಾಮಾಪುರ, ಅಜ್ಜೀಪುರ, ಗಂಗನದೊಡ್ಡಿ, ಸೂಳೇರಿಪಾಳ್ಯ, ಡಿ.ಎಂ. ಸಮುದ್ರ, ಹನೂರು, ಬೆಳತ್ತೂರು ಮತ್ತು ಶಿರಗೋಡು. ಅರಣ್ಯ ಗ್ರಾಮಗಳು: ಪೊನ್ನಾಚಿ, ಚಂಗಡಿ, ವಡಕೆಹಳ್ಳ, ಎಲಚಿಕರ, ಬಿದ್ರಳ್ಳಿ, ಕೊಕ್ಕರೆ, ಮಲೆಮಹದೇಶ್ವರ ಬೆಟ್ಟ, ಇಂಡಿಗನತ್ತ ತುಳಸೀಕೆರೆ, ಮದಗನಾಣೆ, ಕೊಂಬುಡಿಕ್ಕಿ, ತೋಕರೆ, ದೂಡ್ದಾಣೆ, ಹೂಗ್ಯಾಂ, ಮಿಣ್ಯಂ, ಪಚ್ಚೆದೊಡ್ಡಿ, ಮಾರಟಹಳ್ಳಿ ಮತ್ತು ದಿನ್ನಳ್ಳಿ 11 ಸದಸ್ಯರ ಮೇಲುಸ್ತುವಾರಿ ಸಮಿತಿ ರಚಿಸಲೂ ಸೂಚಿಸಲಾಗಿದೆ ಮೂರು ವರ್ಷಗಳ ಅಧಿಕಾರಾವಧಿ ಹೊಂದಿರುವ, ಮೈಸೂರು ವಿಭಾಗೀಯ ಆಯುಕ್ತರ ನೇತೃತ್ವದ ಈ ಸಮಿತಿಯಲ್ಲಿ ಮೂವರು ಸ್ಥಳೀಯ ಶಾಸಕರು ವನ್ಯಧಾಮವನ್ನು 2017 ರಲ್ಲಿ ಇರಲಿದ್ದಾರೆ.

## * ಪಾಕಿಸ್ತಾನದ ಸಂಸತ್ ಚುನಾವಣೆಯಲ್ಲಿ ಮೊದಲ ಹಿಂದೂ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಮಹೇಶ್ ಕುಮಾರ್ ಮಲಾನಿ

ದಕ್ಷಿಣ ಸಿಂದ್ ಪ್ರಾಂತ್ಯದ ಥರ್‌ಪಾಕರ್ ನಿಂದ ಸ್ಪರ್ಧಿಸಿದ್ದ ಇವರು ಪಾಕಿಸ್ತಾನ ಪೀಪಲ್ಸ್ ಪಾರ್ಟಿಯಿಂದ (ಪಿಪಿಪಿ) ಸ್ಪರ್ಧಿಸಿದ್ದರು. ಮಹೇಶ್ ಕುಮಾರ್ ಮಲಾನಿ ಅವರು ಅಕ್ಟೋಬರ್ 24, 1962ರಲ್ಲಿ ಪಾಕಿಸ್ತಾನದ ಮಿಥಿಯಲ್ಲಿ ಜನಿಸಿದರು.

## * ಬ್ರಿಕ್ಸ್ ಬ್ಯಾಂಕ್




ಏನಿದು ಬ್ರಿಕ್ಸ್ ಬ್ಯಾಂಕ್? ಬ್ರಿಕ್ಸ್ ನ್ಯೂ ಡೆವಲಪ್ಮೆಂಟ್ ( ಅಭಿವೃದ್ಧಿ ) ಬ್ಯಾಂಕ್ ಎಂಬುದು ಬ್ರಿಕ್ಸ್ ರಾಷ್ಟ್ರಗಳ ಉದ್ದೇಶಿತ ಜಂಟಿ ಅಭಿವೃದ್ಧಿ ಬ್ಯಾಂಕ್ ಆಗಿದೆ. ಇಂತಹ ಒಂದು ಬ್ಯಾಂಕ್‌ನ್ನು ಸ್ಥಾಪಿಸಲು, ದಕ್ಷಿಣ ಆಫ್ರಿಕಾದ ದರ್ಬಾನ್‌ನಲ್ಲಿ 2013ರ ಮಾರ್ಚ್ 27ರಂದು ನಡೆದ ಬ್ರಿಕ್ಸ್ ಸಮಾವೇಶದಲ್ಲಿ ತೀರ್ಮಾನಿಸಲಾಗಿತ್ತು. 2014, ಜುಲೈ 15 ರಂದು ಬ್ರಿಕ್ಸ್,ರಾಷ್ಟ್ರಗಳಾದ. ಬ್ರೆಜಿಲ್, ಭಾರತ, ರಷ್ಯಾ, ಚೀನಾ ಮತ್ತು ದಕ್ಷಿಣ ಕೊರಿಯಾಗಳಿಂದ ಹೊಸ ಬ್ಯಾಂಕ್ ರಚಿಸಲು ಒಪ್ಪಂದಕ್ಕೆ ಸಹಿ ಹಾಕಿದ್ದಮ. ಗುರಿಗಳೇನು ? ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸಿನ ನೆರಮ ನೀಡುಮದು ಮತ್ತು 100 ಶತಕೋಟಿ ಡಾಲರ್ ಮೊತ್ತದ ಸಮೂಹ ಕಾಪು (ಮುಡಿಪು) ವ್ಯವಸ್ಥೆಯ (ಸಿಆರ್ಎ) ರಚನೆ ಈ ಬ್ಯಾಂಕ್ ಸ್ಥಾಪಿಸುವ ಉದ್ದೇಶವಾಗಿದೆ. ಹಣಕಾಸಿನ ಬಿಕ್ಕಟ್ಟನ್ನು ಎದುರಿಸಲು, ಸದಸ್ಯ ರಾಷ್ಟ್ರಗಳಿಗೆ ಸಿಆರ್ಎ ನೆರವಾಗುತ್ತದೆ. ಇತಿಹಾಸವೇನು ? 2006ರ ಸೆಪ್ಟೆಂಬರ್‌ನಲ್ಲಿ ನ್ಯೂಯಾರ್ಕ್ ನಲ್ಲಿ ಮೊತ್ತಮೊದಲ ಬ್ರಿಕ್ ಸಭೆ ನಡೆಯಿತು. ದಕ್ಷಿಣ ಆಫ್ರಿಕಾ ಹೊರತುಪಡಿಸಿ ಉಳಿದ 4 ರಾಷ್ಟ್ರಗಳ ವಿದೇಶಾಂಗ ಕಾರ್ಯದರ್ಶಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಬಳಿಕ ಪ್ರಮುಖ ರಾಜತಾಂತ್ರಿಕರನ್ನೊಳಗೊಂಡ ಮಹತ್ವದ ಸಭೆ ನಡೆದಿದ್ದು 2008 ಮೇ 16ರಂದು ರಷ್ಯಾದಲ್ಲಿ ಬ್ರಿಕ್‌ನ ಮೊದಲ ಅನೌಪಚಾರಿಕ ಸಭೆ ನಡೆದಿದ್ದು 2009ರ ಜೂನ್ 16ರಂದು ರಷ್ಯಾದಲ್ಲಿಯೇ, ಈ ಸಭೆಯಲ್ಲಿ ಜಾಗತಿಕ ಆರ್ಥಿಕ ಸ್ಥಿತಿಗತಿ ಮತ್ತು ಆರ್ಥಿಕ ಸಂಸ್ಥೆಗಳ ಕುರಿತಾದ ಚರ್ಚೆ ನಡೆಯಿತು. ಹೊಸ ಅಂತರರಾಷ್ಟ್ರೀಯ ಬ್ಯಾಂಕ್ ಸ್ಥಾಪನೆಯ ಚಿಂತನೆ ಶುರುವಾಗಿತ್ತು.

## * ವಂಶವಾಹಿ ಕ್ಯಾನ್ಸರ್ ಮುಕ್ತ ಅವಳಿಗೆ ಜನ್ಮ ನೀಡಿದ ಬೆಂಗಳೂರಿನ ಮಹಿಳೆ

ದಂಪತಿ ಯಾರು ? ಬೆಂಗಳೂರಿನ ಸ್ವಯಂಪ್ರಭಾ ಮತ್ತು ದೇಶಶೀಶ್ ಪುಣಗ್ರಾಹಿ ದಂಪತಿ. ಕಳೆದ 18 ತಿಂಗಳಿನಿಂದ ಮುಂಬಯಿಯಲ್ಲಿದ್ದಾರೆ. ಸಮಸ್ಯೆ ಏನು ? ಪ್ರಭಾ ಅವರು ಬಿಆರ್‌ಸಿಎ1 ಜೀನ್ ಮ್ಯುಟೇಶನ್ ಸಮಸ್ಯೆ ಹೊಂದಿದ್ದಾರೆ. ಭ್ರೂಣವನ್ನು ಮ್ಯುಟೇಶನ್ ಪರೀಕ್ಷೆಗೆ ಒಳಪಡಿಸಿ ಬಳಿಕ ಗರ್ಭಕೋಶದಲ್ಲಿ ಅಳವಡಿಸಿದ್ದರಿಂದ ಅವಳಿ ಮಕ್ಕಳು ಸಮಸ್ಯೆ ಮುಕ್ತವಾಗಿ ಜನಿಸಿದ್ದಾರೆ. ಜೀನ್‌ಗಳ ಪಾತ್ರವೇನು ? ಎಲ್ಲರಲ್ಲೂ 23 ಜೋಡಿ ಕ್ರೋಮೋಸೋಮ್‌ಗಳಿವೆ. ಪ್ರತಿ ಕ್ರೋಮೋಸೋಮ್‌ನಲ್ಲಿ ಡಿಎನ್ಎ ಯಿಂದ ಮಾಡಲ್ಪಟ್ಟ ಜೀನ್ ಇದೆ. ಡಿಎನ್ಎ ವ್ಯಕ್ತಿಯ ವೈಶಿಷ್ಟ್ಯ ಮಾತ್ರವಲ್ಲದೆ ರೋಗ ಸಾಧ್ಯತೆಗಳ ಮುನ್ಸೂಚನೆ ನೀಡುತ್ತದೆ. ಜೀನ್‌ಗಳಲ್ಲಿ ವ್ಯತ್ಯಯವಿದ್ದರೆ ಮಕ್ಕಳು ಡೌನ್ ಸಿಂಡ್ರೋಮ್‌ನಂಥ ಸಮಸ್ಯೆಗಳೊಂದಿಗೆ ಹುಟ್ಟುತ್ತಾರೆ. ಅಳವಡಿಕೆ ಪೂರ್ವ ಪರೀಕ್ಷೆಯ ಪಾತ್ರ : ಪ್ರನಾಳ ಶಿಶು ಗರ್ಭಧಾರಣೆ ಸಂದರ್ಭ ಭ್ರೂಣವನ್ನು ಗರ್ಭಕೋಶದಲ್ಲಿಡುವ ಮೊದಲೇ ಪರೀಕ್ಷೆಗೆ ಒಳಪಡಿಸುಮದರಿಂದ ಕ್ರೋಮೋಸೋಮ್ ಸಮಸ್ಯೆ(ಹೆಚ್ಚು/ಕಡಿಮೆ ದ್ವಿಪ್ರತಿ) ಬಯಲಾಗುತ್ತದೆ. ಅಂಥ ಭ್ರೂಣಗಳನ್ನು ವರ್ಗಾಯಿಸಲಾಗುಮದಿಲ್ಲ. ತಲಸ್ಸೀಮಿಯಾ, ಸಿಸ್ಟಿಕ್ ಫೈಬ್ರೋಸಿಸ್, ಕ್ಯಾನ್ಸರ್‌ನಂಥ ರೋಗಗಳ ಸೂಚನಗಳೂ ಇಲ್ಲಿ ದೊರೆಯುತ್ತವೆ. ಅಳವಡಿಕೆಪೂರ್ವ ವಂಶವಾಹಿ ಪರೀಕ್ಷೆ ಹೇಗೆ ನಡೆಯುತ್ತದೆ ? ಹೆಚ್ಚುವರಿ ಅಂಡಾಣುಗಳ ಸೃಷ್ಟಿಯಾಗಿ ಮಹಿಳೆಗೆ ಹಾರ್ಮೋನ್ ಪ್ರಚೋದಕ ಚಿಕಿತ್ಸೆನೀಡಲಾಗುತ್ತದೆ. ಪುರುಷ ವೀರ್ಯದಿಂದ ಒಂಟಿ ವೀರ್ಯಾಣು ಪ್ರತ್ಯೇಕಿಸಿ ಬಲಿತ ಅಂಡಾಣುವಿನ ಜೀವಕೋಶಕ್ಕೆ ಸೇರ್ಪಡೆ. ಒಂದುಗೂಡಿದ ವೀರ್ಯಾಣು-ಅಂಡಾಣುವನ್ನು ಇನ್ ಕ್ಯುಬೇಟರ್‌ನಲ್ಲಿ ಇಡಲಾಗುತ್ತದೆ. ಭ್ರೂಣದಲ್ಲಿ ಒಳಕೋಶಗಳು ಮತ್ತು

ಪ್ಲಾಸೆಂಟಾ ರಚನೆಗೆ ಕಾರಣವಾಗುವ ಕೋಶಗಳ ಪ್ರತ್ಯೇಕತೆಯನ್ನು ಸ್ಪಷ್ಟಪಡಿಸುವ ಬ್ಲಾಸ್ಟೋಸಿಸ್ಟ್ ಹಂತ ಬಂದಾಗ ಭ್ರೂಣದೊಳಗಿನಿಂದ ದ್ರವವನ್ನು ಹೊರತೆಗೆದು ಬಯಾಪ್ಸಿ ನಡೆಸಲಾಗುತ್ತದೆ. ಬಯಾಪ್ಸಿಗೆ ಒಳಪಡಿಸಲಾದ ಕೋಶಗಳ ವಂಶವಾಹಿ ವಿಶ್ಲೇಷಣೆ ನಡೆಸಿದಾಗ ಕ್ರೋಮೋಸೋಮ್ ನಲ್ಲಿರಬಹುದಾದ ವ್ಯತ್ಯಯಗಳು ಗೋಚರಿಸುತ್ತವೆ.

## * ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್|



ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಒಲಂಪಿಕ್ಸ್ ಸರಿ ಸಮಾನವಾದ ರ್ಯಾಂಕಿಂಗ್(□□□□□□□) ಅಂಕಗಳನ್ನು ನೀಡುವ ಪ್ರತಿಷ್ಠಿತ ಟೂರ್ನಿಯಾದ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ 24ನೇ ಆವೃತ್ತಿ ಆರಂಭವಾಗಲಿದೆ. ಏಳು ದಿನಗಳ ಕಾಲ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಈ ಬಾರಿ ಬ್ಯಾಡ್ಮಿಂಟನ್ ಶಕ್ತಿಕೇಂದ್ರ ಚೀನಾ ಆತಿಥ್ಯ ವಹಿಸಿಕೊಂಡಿದೆ. ಭಾರತ ತಂಡ ಈವರೆಗೂ ಟೂರ್ನಿಯ ಯಾವ ವಿಭಾಗದಲ್ಲೂ ವಿಶ್ವ ಚಾಂಪಿಯನ್ ಆಗಿಲ್ಲ. 7 ಬಾರಿ ಪದಕ ಗೆದ್ದಿರುವ ಭಾರತ ಎರಡು ಬಾರಿ ಬೆಳ್ಳಿ ಜಯಿಸಿರುವುದೇ ಈವರೆಗಿನ ಶ್ರೇಷ್ಠ ಸಾಧನೆ. ಸೈನಾ ಹಾಗೂ ಸಿಂಧು ಈ ಬೆಳ್ಳಿಯನ್ನು ಗೆದ್ದಿದ್ದರು. 2013 ಹಾಗೂ 2014ರಲ್ಲಿ ಕಂಚಿನ ಪದಕವನ್ನೂ ಈ ಟೂರ್ನಿಯಲ್ಲಿ ಜಯಿಸಿದ್ದಾರೆ. ಕಣದಲ್ಲಿರುವ ಭಾರತೀಯರು ಪುರುಷರ ಸಿಂಗಲ್ಸ್ : ಕೆ.ಶ್ರೀಕಾಂತ್, ಸೌರಭ್ ವರ್ಮ, ಎಚ್‌ಎಸ್ ಪ್ರಣಯ್, ಬಿಎಸ್ ಪ್ರಣೀತ್. ಮಹಿಳಾ ಸಿಂಗಲ್ಸ್ : ಸೈನಾ ನೆಹ್ವಾಲ್, ಪಿವಿ ಸಿಂಧು. ಪುರುಷರ ಡಬಲ್ಸ್ : ಮನು, ಅತ್ರಿ-ಸುಮಿತ್ ರೆಡ್ಡಿ, ಸಾತ್ವಿಕ್‌ರಾಜ್ ರಂಕಿರೆಡ್ಡಿ-ಚಿರಾಗ್ ಶೆಟ್ಟಿ, ಅರ್ಜುನ್ ಎಂಆರ್-ರಾಮಚಂದ್ರನ್ ಶ್ಲೋಕ್, ತರುಣ್ ಕೋನ-ಸೌರಭ್ ಶರ್ಮ. ಮಹಿಳಾ ಡಬಲ್ಸ್ : ಸನ್ಯೋಂಗಿತಾ ಘೋರ್ಪಡೆ-ಪಜಕ್ತಾ ಸಾವಂತ್, ಮೇಘನಾ ಜಕ್ಕಂಪುಡಿ-ಪೂರ್ವಿಶಾ ಎಸ್ ರಾಮ್, ಕುಹೂ ಗಾರ್ಗ್-ನಿನ್ ಗಿಶಿ ಹಜಾರಿಕಾ, ಅಶ್ವಿನಿ ಪೊನ್ನಪ್ಪ-ಸಿಕ್ಕಿರೆಡ್ಡಿ. ಮಿಶ್ರ ಡಬಲ್ಸ್ : ಪ್ರಣವ್ – ಚೋಪ್ರಾ ಸಿಕ್ಕಿರೆಡ್ಡಿ, ಸಾತ್ವಿಕ್‌ರಾಜ್ ರಂಕಿರೆಡ್ಡಿ- ಅಶ್ವಿನಿ ಪೊನ್ನಪ್ಪ, ಸೌರಭ್ ಶರ್ಮ ಅನುಷ್ಕಾ ಪಾರಿಖ್, ರೋಹನ್ ಕಪೂರ್ – ಕುಹೂ ಗಾರ್ಗ್